# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: RKVY ಯೋಜನೆಯಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPP-IAD) ಹಾಗೂ ರೈತ ಉತ್ಪಾದಕರ ಸಂಸ್ಥೆಗಳ (FPO) ಕಾರ್ಯಕ್ರಮದ ಅನುಷ್ಠಾನದ ಮೇಲುಸ್ತುವಾರಿ ಮಾಡಲು ಯೋಜನಾ ಅನುಮೋದನಾ ಸಮಿತಿ (Project Approval Committee- PAC) ರಚಿಸುವ ಕುರಿತು.

ಓದಲಾಗಿದೆ

1. ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯದ SFAC ಮಾರ್ಗಸೂಚಿ 2012-13.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿ: 15-05-2017 ರಂದು ನಡೆದ RKVY ಯೋಜನೆಯ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಸಭೆಯ ನಡಾವಳಿ.
3. ಸರ್ಕಾರದ ಆದೇಶ ಸಂ:HCD 363 HGM 2015, Dated: 13.10.2015.
4. ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆರವರ ಏಕ ಕಡತ ಪ್ರಸ್ತಾವನೆ ಸಂಖ್ಯೆ: ಜಅಇ/ ಏಕ ಕಡತ/PPP – IAD/2/2017-18.

## ಪ್ರಸ್ತಾವನೆ:

ಮೇಲೆ ಓದಲಾದ (1)ರ ಮಾರ್ಗಸೂಚಿಯಲ್ಲಿ ಕೇಂದ್ರ ಸರ್ಕಾರವು 2012-13ನೇ ಸಾಲಿನಿಂದ **ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ** (PPP-IAD) ಕಾರ್ಯಕ್ರಮ ಅನುಷ್ಠಾನಗೊಳಿಸಲು ತೀರ್ಮಾನಿಸಿದ್ದು ಅದನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (RKVY) ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಿರುತ್ತದೆ. ಸದರಿ ಕಾರ್ಯಕ್ರಮದ ರೂಪು ರೇಷೆಗಳು ಖಾಸಗಿ ವಲಯದ ಹಲವಾರು ಯೋಜನೆಗಳನ್ನು ಒಗ್ಗೂಡಿಸಿ ಕೃಷಿ ಹಾಗೂ ಕೃಷಿ ಸಂಬಂಧಿತ ವಲಯದಲ್ಲಿ ವಿಸ್ತರಣೆ ಹಾಗೂ ಅಭಿವೃದ್ಧಿ ಸಾಧಿಸುವ ಕುರಿತಾಗಿರುತ್ತದೆ. ರೈತರನ್ನು ಒಗ್ಗೂಡಿಸುವ, ಅತ್ಯವಶ್ಯಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಸೃಜನೆ, ಹೊಸ ತಾಂತ್ರಿಕತೆಗಳ ಪರಿಚಯಿಸುವಿಕೆ, ಮೌಲ್ಯವರ್ಧನೆ ಮತ್ತು ಕೃಷಿಯಲ್ಲಿ ಸರಬರಾಜು ಸರಪಳಿಯನ್ನು ಕಲ್ಪಿಸುವಲ್ಲಿ ಸಮಗ್ರಗೊಳಿಸುವ ಕುರಿತು ಗಮನಹರಿಸುವುದು ಇದರ ಉದ್ದೇಶವಾಗಿರುತ್ತದೆ.

ಮೇಲೆ ಓದಲಾದ (2)ರ ದಿನಾಂಕ: 15/05/2017 ರಂದು ನಡೆದ RKVY ಯೋಜನೆಯ ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಸಭೆಯ ನಡಾವಳಿಯಲ್ಲಿ PPP-IAD ಕಾರ್ಯಕ್ರಮವನ್ನು 2017-18ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಹಾಗೂ ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲು ಜಲಾನಯನ ಅಭಿವೃದ್ಧಿ ಇಲಾಖೆಗೆ ರೂ. 6.00 ಕೋಟಿಗಳ ಅನುದಾನಕ್ಕೆ ಅನುಮೋದನೆ ನೀಡಿದೆ.

ತೋಟಗಾರಿಕೆ ಇಲಾಖೆಯು 2015-16 ನೇ ಸಾಲಿನಿಂದ PPP-IHD (Public Private Partnership-Integrated Horticulture Development) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದು, ಇದಕ್ಕಾಗಿ ಇಲಾಖೆಯು ರೈತರನ್ನು ಒಗ್ಗೂಡಿಸಲು ರೈತ ಉತ್ಪಾದಕ ಸಂಸ್ಥೆಯ (FPO) ಅಭಿವೃದ್ಧಿಯನ್ನು ಕೈಗೊಂಡಿರುತ್ತದೆ. ಈ ಸಂಬಂಧ ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೇ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಮೇಲೆ ಓದಲಾದ (3)ರಲ್ಲಿ ರಚಿಸಿ ಆದೇಶಿಸಿರುತ್ತದೆ.

ಯೋಜನಾ ಅನುಮೋದನಾ ಸಮಿತಿಯು (Project Approval Committee- PAC) ಈ ಕೆಳಕಂಡಂತೆ ರಚಿತವಾಗಿರುತ್ತದೆ:

| | |
|---|---|
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಕೃಷಿ ಇಲಾಖೆ | ಅಧ್ಯಕ್ಷರು |
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು (ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ | ಸದಸ್ಯರು |
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಯೋಜನಾ ಇಲಾಖೆ. | ಸದಸ್ಯರು |
| ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ. | ಸದಸ್ಯರು |
| ಆಯುಕ್ತರು, ಕೃಷಿ ಇಲಾಖೆ. | ಸದಸ್ಯರು |
| ಸಂಶೋಧನಾ ನಿರ್ದೇಶಕರು, ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳು | ಸದಸ್ಯರು |
| ವ್ಯವಸ್ಥಾಪಕ ನಿರ್ದೇಶಕರು, ಕೆಪೆಕ್, ಬೆಂಗಳೂರು. | ಸದಸ್ಯರು |
| ನಬಾರ್ಡ್‌ನ ಪ್ರತಿನಿಧಿ, ಬೆಂಗಳೂರು. | ಸದಸ್ಯರು |
| ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ. | ಸದಸ್ಯ ಕಾರ್ಯದರ್ಶಿಗಳು |

**ಯೋಜನಾ ಅನುಮೋದನಾ ಸಮಿತಿಯ (Project Approval Committee- PAC) ಪಾತ್ರ ಹಾಗೂ ಜವಾಬ್ದಾರಿಗಳು ಈ ಕೆಳಕಂಡಂತಿರುತ್ತದೆ:**

1. ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಮೇಲುಸ್ತುವಾರಿ ಮಾಡುವುದು.
2. ಯೋಜನೆಗೆ ಅನುಮೋದನೆ ನೀಡುವುದು ಮತ್ತು ಪ್ರತಿ ಯೋಜನೆಗೆ ಆರ್ಥಿಕ ಸಹಾಯದ ಪ್ರಮಾಣವನ್ನು ನಿರ್ಧರಿಸುವುದು.
3. ಯೋಜನೆಗಳ ಆಯ್ಕೆಗೆ ಮಾನದಂಡಗಳನ್ನು ಅಭಿವೃದ್ಧಿಪಡಿಸುವುದು.
4. ಕಾಲಕಾಲಕ್ಕೆ PPP-IAD ಯೋಜನೆಗಳನ್ನು ಮೇಲ್ವಿಚಾರಣೆ ಮಾಡುವುದು.
5. ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ಹಾಗೂ ಮಾರ್ಗಸೂಚಿಯನ್ನು ತಯಾರಿಸುವುದು.
6. ಸೂಕ್ತ ಪ್ರಚಾರದ ಮೂಲಕ ಯೋಜನೆಯನ್ನು ಜನಪ್ರಿಯಗೊಳಿಸಲು ಕ್ರಮವಹಿಸುವುದು.
7. ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರುವುದು.
8. ಸಮಿತಿಯ ಸದಸ್ಯರು ಮತ್ತು ಸಹ ಸದಸ್ಯರನ್ನು ಅಗತ್ಯ ಬಂದಾಗ ಆಯ್ಕೆ ಮಾಡುವುದು.
9. ಕೃಷಿ ಇಲಾಖೆ/ ಜಲಾನಯನ ಅಭಿವೃದ್ಧಿ ಇಲಾಖೆಯ ಕೇಂದ್ರ ಕಛೇರಿಯ ಹಂತದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು, ಅವಶ್ಯ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲು ಕ್ರಮ ವಹಿಸುವುದು.
10. ಯೋಜನಾ ಉಸ್ತುವಾರಿ ಘಟಕ (Project Monitoring Unit-PMU) ಹಾಗು PPPIAD ಕೋಶವನ್ನು ಕೃಷಿ ಇಲಾಖೆ/ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ರಚಿಸಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.
11. ಯೋಜನಾ ಉಸ್ತುವಾರಿ ಘಟಕ (Project Monitoring Unit-PMU) ಹಾಗು PPPIAD ಕೋಶಕ್ಕೆ ಸೂಕ್ತವಾದ ಜವಾಬ್ದಾರಿ ಹಾಗೂ ಪಾತ್ರಗಳನ್ನು ನಿಗಧಿಪಡಿಸುವುದು.
12. ಖಾಸಗಿ ಸಂಸ್ಥೆಯವರು ಯೋಜನಾ ಉಸ್ತುವಾರಿ ಸಮಿತಿ (PMU) ಮುಖಾಂತರ ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದನೆ ನೀಡುವುದು.
13. ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇನ್ನಿತರೇ ವಿಷಯಗಳನ್ನು ತೀರ್ಮಾನಿಸುವುದು.

**ಅನುಷ್ಠಾನ ಮಾರ್ಗೋಪಾಯಗಳು :**

- ಕಂಪನಿಗಳು / ಖಾಸಗಿ ಪಾಲುದಾರರು ಸಮಗ್ರ ಕೃಷಿ ಅಭಿವೃದ್ಧಿಗಾಗಿ ವಿವರವಾದ ಯೋಜನಾ ವರದಿಯನ್ನು (DPR) ಸಲ್ಲಿಸಬೇಕು ಹಾಗೂ ತಾಂತ್ರಿಕತೆಯ ಅನುಷ್ಠಾನಕ್ಕೆ ಇಲಾಖೆಯೊಂದಿಗೆ ಸೇರ್ಪಡೆಗೊಳ್ಳುವ ಜವಾಬ್ದಾರಿ ತೆಗೆದುಕೊಳ್ಳುವುದು.
- ಅವಶ್ಯಕತೆಗೆ ಅನುಸಾರವಾಗಿ ಸುಧಾರಿತ ತಳಿಗಳ ಬೀಜ/ಸಸಿಗಳನ್ನು ಒದಗಿಸಲು ಮತ್ತು ನೂತನ ತಂತ್ರಜ್ಞಾನಗಳನ್ನು ಪರಿಚಯಿಸಲು ರಾಷ್ಟ್ರಮಟ್ಟದ ಸಂಸ್ಥೆಗಳು/ ರಾಜ್ಯದ ಕೃಷಿಗೆ ಸಂಬಂಧಿಸಿದ ವಿಶ್ವ ವಿದ್ಯಾಲಯಗಳು/ ಖಾಸಗಿ ವಲಯಗಳೊಂದಿಗೆ ಸಮನ್ವಯ ಮಾಡುವುದು.
- ಖಾಸಗಿ ಸಂಸ್ಥೆಯವರು ಯೋಜನಾ ಪ್ರಸ್ತಾವನೆಗಳನ್ನು ನೇರವಾಗಿ ಸಂಬಂಧಿತ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಮೂಲಕ ಸಲ್ಲಿಸಬಹುದು. ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಆಯುಕ್ತರು, ಕೃಷಿ ಇಲಾಖೆ /ಜಲಾನಯನ ಅಭಿವೃದ್ಧಿ ಇಲಾಖೆ ಇವರಿಗೆ ಸಲ್ಲಿಸುವುದು.
- ಆಯುಕ್ತರು, ಕೃಷಿ ಇಲಾಖೆ/ ಜಲಾನಯನ ಅಭಿವೃದ್ಧಿ ಇಲಾಖೆ ಇವರ ನೇತೃತ್ವದಲ್ಲಿ ರಚಿತಗೊಳ್ಳುವ ಯೋಜನಾ ಉಸ್ತವಾರಿ ಘಟಕ (Project Monitoring Unit-PMU) ಸಮಿತಿಯಲ್ಲಿ ಮೊದಲಿಗೆ, ವಿಸ್ತೃತ ಯೋಜನಾ ವರದಿಯನ್ನು ಮೌಲ್ಯಮಾಪನ ಮಾಡಿ, ನಂತರ ಯೋಜನಾ ಅನುಮೋದನಾ ಸಮಿತಿಯಲ್ಲಿ (PAC) ಅನುಮೋದನೆ ಪಡೆಯುವುದು.
- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ನೇತೃತ್ವದಲ್ಲಿನ ಯೋಜನೆ ಅನುಮೋದನಾ ಸಮಿತಿಯು (Project Approval Committee - PAC) ಯೋಜನಾ ವರದಿಗಳನ್ನು ಮೌಲ್ಯಮಾಪನ ಮಾಡಿ ಅನುಮೋದನೆ ನೀಡುವುದು.
- ಅನುಮೋದನೆಗೊಂಡ ಯೋಜನೆಗಳನ್ನು ಕೃಷಿ ಇಲಾಖೆ /ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಖಾಸಗಿ ಪಾಲುದಾರರ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸುವುದು.
- ಆರ್ಥಿಕ ನೆರವನ್ನು ಫಲಾನುಭವಿಗಳಿಗೆ (ಸರ್ಕಾರೇತರ ಸಂಸ್ಥೆಗಳ / ರೈತ ಉತ್ಪಾದಕ ಸಂಸ್ಥೆ / ರೈತ ಆಸಕ್ತ ಗುಂಪುಗಳನ್ನು / ಖಾಸಗಿ ಸಂಸ್ಥೆಗಳು) ಅನುಮೋದನೆಗೊಂಡ ಯೋಜನೆ ಅನ್ವಯ ನೀಡುವುದು.
- ಯೋಜನೆಯ ಒಟ್ಟಾರೆ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸುವುದಕ್ಕಾಗಿ, FPO ಗಳಿಗೆ ಸಂಬಂಧಿಸಿದ ವಿವಿಧ ಅಂಶಗಳ ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ಇಲಾಖೆಯಲ್ಲಿ ಸ್ವತಂತ್ರ ಘಟಕವನ್ನು (PPP-IAD-cell) ರಚಿಸುವುದು.
- ಪ್ರತಿ 5 ರೈತ ಉತ್ಪಾದಕರ ಸಂಸ್ಥೆಗಳ ಗುಚ್ಛಕ್ಕೆ ರೂ.20.00 ಲಕ್ಷಗಳನ್ನು 2 ವರ್ಷದ ಅವಧಿಗೆ ನಿಗದಿ ಪಡಿಸಲಾಗಿದೆ.
- ರೈತ ಉತ್ಪಾದಕರ ಸಂಸ್ಥೆ ರಚನೆಯಲ್ಲಿ ತೋಟಗಾರಿಕೆ ಇಲಾಖೆಯ Centre of Excellence ಇದರ ಸೇವೆಯನ್ನು ಬಳಸಿಕೊಳ್ಳುವುದು.
- ತೋಟಗಾರಿಕೆ ಇಲಾಖೆಯಲ್ಲಿರುವಂತೆ ರೈತ ಉತ್ಪಾದಕರ ಸಂಸ್ಥೆ ಅನುಷ್ಠಾನಕ್ಕೆ ಪೂರಕವಾಗಿ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸುವುದು.

**ಇಲಾಖೆಯ ಪಾತ್ರ:**

- ಆಯುಕ್ತರು, ಕೃಷಿ ಇಲಾಖೆ/ ಜಲಾನಯನ ಅಭಿವೃದ್ಧಿ ಇಲಾಖೆ ಇವರು PPP-IAD ಅಡಿ ಸಲ್ಲಿಸಲಾದ ಯೋಜನೆಗಳನ್ನು ಪರಿಶೀಲಿಸಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPP-IAD) ಯೋಜನಾ ಅನುಮೋದನಾ ಸಮಿತಿ (Project Approval Committee- PAC) ಗೆ ಸಲ್ಲಿಸುವುದು.
- ಗುರುತಿಸಿದ ಗುಚ್ಛಗಳಲ್ಲಿ ರೈತ ಗುಂಪುಗಳನ್ನು ಒಗ್ಗೂಡಿಸಲು, ಅಗತ್ಯ ಸಾಲ ಸೌಲಭ್ಯವನ್ನು ಒದಗಿಸಲು, ತಂತ್ರಜ್ಞಾನದಲ್ಲಿನ ಕೊರತೆಯನ್ನು ನಿವಾರಿಸಲು ಮತ್ತು ರೈತ ಗುಂಪುಗಳು/ಸಂಸ್ಥೆಗಳು ಮತ್ತು ಕಂಪನಿಗಳ ಮಧ್ಯೆ ಸಂಪರ್ಕ ಕಲ್ಪಿಸಲು ಮತ್ತು ಅಭಿವೃದ್ಧಿ ಇತ್ಯಾದಿಗಳಿಗೆ ಅಗತ್ಯವಿರುವ ವೃತ್ತಿಪರ ಸೇವೆಗಳನ್ನು ಒದಗಿಸುವುದು.
- ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅನುಮೋದನೆಗೊಂಡ ಯೋಜನೆಯ ಸಂಸ್ಥೆಯೊಂದಿಗೆ ಕಾರ್ಯನಿರ್ವಹಿಸುವುದು.
- ಯೋಜನೆಯ ವಿವರವಾದ ಮಾರ್ಗಸೂಚಿಗಳನ್ನು ಯೋಜನಾ ಅನುಮೋದನಾ ಸಮಿತಿಯ (Project Approval Committee- PAC) ಅನುಮೋದನೆಯೊಂದಿಗೆ ಜಾರಿಗೊಳಿಸುವುದು.
- ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPP-IAD) ಹಾಗೂ ರೈತ ಉತ್ಪಾದಕರ ಸಂಸ್ಥೆಗಳ (FPO) ಯೋಜನೆಗಳನ್ನು ಅನುಷ್ಠಾನದ ಮೇಲುಸ್ತುವಾರಿ ಮಾಡಲು ಪ್ರತ್ಯೇಕವಾದ ಯೋಜನಾ ಉಸ್ತುವಾರಿ ಘಟಕ (Project Monitoring Unit-PMU) ಹಾಗು PPP-IAD ಕೋಶವನ್ನು ರಚಿಸುವುದು.

**ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPP-IAD)ಯೋಜನೆಯ ಅನುಷ್ಠಾನದ ಮುಖ್ಯ ಹಂತಗಳು:**

- ಈ ಯೋಜನೆಯಡಿ ಭಾಗವಹಿಸಲು ಇಚ್ಛಿಸುವ ಸಂಸ್ಥೆಗಳೊಂದಿಗೆ ಅಥವಾ ಸಂಸ್ಥೆಗಳ ಗುಂಪಿನೊಂದಿಗೆ ಸಮಾಲೋಚನಾ ಸಮ್ಮೇಳನ ಆಯೋಜನೆ.
- ಖಾಸಗಿ ಪಾಲುದಾರರಿಂದ ಸಂಬಂಧಿಸಿದ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಿಗೆ ವಿಸ್ತೃತ ಯೋಜನಾ ವರದಿ ಸಲ್ಲಿಕೆ. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಂದ ಅಭಿಪ್ರಾಯದೊಂದಿಗೆ ಅದನ್ನು ಕೃಷಿ ಇಲಾಖೆ/ ಜಲಾನಯನ ಅಭಿವೃದ್ಧಿ ಇಲಾಖೆಗೆ ಸಲ್ಲಿಕೆ.
- ಯೋಜನಾ ಉಸ್ತುವಾರಿ ಘಟಕದಿಂದ ಪ್ರಸ್ತಾಪಿಸಿರುವ ಕಾರ್ಯಚಟುವಟಿಕೆಗಳು ಮತ್ತು ಮೂಲಭೂತ ಸೌಲಭ್ಯಗಳು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಇರುವ ಬಗ್ಗೆ ಯೋಜನೆಗಳ ಪರಿಶೀಲನೆ.
- ಯೋಜನೆಗಳನ್ನು ರಾಜ್ಯ ಮಟ್ಟದ ಯೋಜನೆ ಅನುಮೋದನಾ ಸಮಿತಿಗೆ (Project Approval Committee- PAC) ಅನುಮೋದನೆಗಾಗಿ ಸಲ್ಲಿಸುವುದು
- ರಾಜ್ಯ ಮಟ್ಟದ ಯೋಜನೆ ಅನುಮೋದನಾ ಸಮಿತಿ ಅನುಮೋದನೆ ಅನ್ವಯ ಸರ್ಕಾರದ ಆದೇಶ ನೀಡುವುದು
- ಒಡಂಬಡಿಕೆ ಪತ್ರ ಸಹಿ ಮಾಡುವುದು ಹಾಗೂ ಇಲಾಖೆ ವತಿಯಿಂದ ಅನುಷ್ಠಾನ ಮಾರ್ಗಸೂಚಿಗಳನ್ನು ನೀಡುವುದು
- ಪ್ರಾಯೋಜನೆಯ ಅನುಷ್ಠಾನ

ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ತೋಟಗಾರಿಕೆ ಇಲಾಖೆರವರ ಅಧ್ಯಕ್ಷತೆಯಲ್ಲಿನ ಯೋಜನಾ ಅನುಮೋದನಾ ಸಮಿತಿಯು (PAC) ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದನೆ ನೀಡಿದ ನಂತರ PPP-IHD ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿರುವಂತೆಯೇ ಕೃಷಿ ಇಲಾಖೆಯಲ್ಲಿಯೂ ಸಹ ಯೋಜನಾ ಅನುಮೋದನಾ ಸಮಿತಿಯನ್ನು (PAC) ರಚಿಸಿ PPP-IAD ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಹಾಗೂ ಅನುಷ್ಠಾನಗೊಳಿಸಲು ಅನುಮೋದನೆ ಅವಶ್ಯಕವಾಗಿರುವುದರಿಂದ PPP-IAD ಕಾರ್ಯಕ್ರಮದ ಅನುಷ್ಠಾನ ಮೇಲುಸ್ತುವಾರಿಗಾಗಿ ಕೃಷಿ ಇಲಾಖೆಯಲ್ಲಿ ಯೋಜನಾ ಅನುಮೋದನಾ ಸಮಿತಿಯು (PAC) ರಚನೆಗೆ ಮೇಲೆ ಓದಲಾದ (4)ರಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ ಪ್ರಸ್ತಾಪಿಸಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 75 ಕೃಉಇ 2017, ಬೆಂಗಳೂರು, ದಿನಾಂಕ: 27.11.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 2017–18ನೇ ಸಾಲಿನಿಂದ **ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ** (PPP-IAD) ಕಾರ್ಯಕ್ರಮ ಅನುಷ್ಠಾನಗೊಳಿಸುವ ಸಂಬಂಧ ಆಡಳಿತಾತ್ಮಕ ಮಂಜೂರಾತಿ ಮತ್ತು ಅದನ್ನು ಮೇಲುಸ್ತುವಾರಿ ಮಾಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಕೃಷಿ ಇಲಾಖೆರವರ ನೇತೃತ್ವದಲ್ಲಿ ಯೋಜನಾ ಅನುಮೋದನಾ ಸಮಿತಿಯನ್ನು ರಚಿಸಲು ಸರ್ಕಾರವು ಅನುಮೋದಿಸಿದೆ.

ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ ಯೋಜನೆ ಮುಖೇನ ಅನುಷ್ಠಾನಗೊಳಿಸಲು ಉದ್ದೇಶಿತವಾಗಿರುವ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPP-IAD) ಹಾಗೂ ರೈತ ಉತ್ಪಾದಕರ ಸಂಸ್ಥೆಗಳ (FPO) ಯೋಜನೆಯ ಉದ್ದೇಶಗಳು ಈ ಕೆಳಕಂಡಂತಿವೆ:

**ಉದ್ದೇಶಗಳು :**

1) ಉತ್ಪಾದನಾ ಪೂರ್ವ ಹಂತದಿಂದ ಹಿಡಿದು ಗ್ರಾಹಕರವರೆಗೆ ಸಮರ್ಪಕ ನೆರವಿನ ಮೂಲಕ ಸಂಪೂರ್ಣ ಮೌಲ್ಯವೃದ್ಧಿ ಸರಪಳಿಯನ್ನು ನಿರ್ವಹಿಸುವಲ್ಲಿ ನೆರವು ನೀಡುವುದು.
2) ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ ಉತ್ತಮ ಕೃಷಿ ತಂತ್ರಜ್ಞಾನಗಳ ಪ್ರೋತ್ಸಾಹ ಹಾಗೂ ರೈತರ ಪೌಷ್ಠಿಕಾಂಶದ ಭದ್ರತೆಯನ್ನು ಒದಗಿಸುವುದು.
3) ರೈತ ಉತ್ಪಾದಕರ ಸಂಸ್ಥೆಗಳ (FPO) ನಿರ್ಮಾಣಕ್ಕಾಗಿ ರೈತರನ್ನು ಗ್ರಾಮ ಮಟ್ಟದಲ್ಲಿ ರೈತ ಆಸಕ್ತಿ ಗುಂಪುಗಳು (Farmer Interest Group-FIGs) 15–20 ಸದಸ್ಯರ ಗುಂಪುಗಳಾಗಿ ಒಗ್ಗೂಡಿಸಿ ನಿರ್ದಿಷ್ಟ ಉತ್ಪನ್ನಗಳನ್ನು ವ್ಯವಹರಿಸಲು ಸೂಕ್ತವಾದ ಫೆಡರೇಟಿಂಗ್ ಸಂಘಗಳನ್ನು ನಿರ್ಮಿಸುವುದು. ಅಂದರೆ, FPO ಗಳು ಉತ್ಪನ್ನ ನಿರ್ದಿಷ್ಟ ಗುಂಪುಗಳು/ ವಾಣಿಜ್ಯ ಬೆಳೆಚಕ್ರದ ಕುರಿತು ಯೋಜಿಸಿ ಅನುಷ್ಠಾನಗೊಳಿಸುವುದು.
4) ಕೌಶಲ್ಯ ಮತ್ತು ಕೌಶಲ್ಯರಹಿತ ವ್ಯಕ್ತಿಗಳಿಗೆ, ವಿಶೇಷವಾಗಿ ನಿರುದ್ಯೋಗಿ ಯುವಕರಿಗೆ/ಯುವತಿಯರಿಗೆ ಉದ್ಯೋಗವಕಾಶಗಳನ್ನು ಕಲ್ಪಿಸುವುದು.
5) ಮೌಲ್ಯ ವರ್ಧನೆಯನ್ನು ಸುಧಾರಿಸುವುದು ಮತ್ತು ಆದಾಯ ಹೆಚ್ಚಿಸುವ ಬಗ್ಗೆ ಖಾತರಿ ಪಡಿಸಿಕೊಳ್ಳುವ ಜೊತೆ ಕೃಷಿಯನ್ನು ಲಾಭದಾಯಕ ಉದ್ದಿಮೆಯನ್ನಾಗಿ ಮಾಡುವುದು ಮತ್ತು ರೈತರ ಆದಾಯವನ್ನು ವೃದ್ಧಿಸುವುದು.

**ಖಾಸಗಿ ಸಂಸ್ಥೆಯವರು ಸಲ್ಲಿಸುವ ವಿಸ್ತೃತ ಯೋಜನಾ ವರದಿಯಲ್ಲಿ ಇರಬೇಕಾದ ವಿವರಗಳು:**

ವಿಸ್ತೃತ ಯೋಜನ ವರದಿ ಈ ಕೆಳಕಂಡ ಕನಿಷ್ಠ ಮಾಹಿತಿಯನ್ನು ಒಳಗೊಂಡಿರಬೇಕು.

- ಪೀಠಿಕೆ ಹಾಗೂ ಹಿನ್ನೆಲೆ
- ಪ್ರಾಥಮಿಕ ಸಮೀಕ್ಷೆ ವರದಿ
- ಕಂಪನಿಗಳು/ ಖಾಸಗಿ ಪಾಲುದಾರರ ವಿವರಗಳು
- SWOT (Strength, Weakness, Opportunity and Threat) ವಿಶ್ಲೇಷಣೆಗಳು
- ಉದ್ದೇಶಗಳು
- ಯೋಜನೆಯ ವ್ಯಾಪ್ತಿ
- ಅನುಷ್ಠಾನ ವಿಧಾನ – ಘಟಕವಾರು ವಿವರಗಳು, ಉತ್ಪಾದನಾ ಪೂರ್ವ ಹಂತದಿಂದ ಗ್ರಾಹಕರಿಗೆ ತಲುಪುವರೆಗೆ ಸಂಪೂರ್ಣ ಮೌಲ್ಯ ಸರಪಳಿಯಲ್ಲಿ ಪ್ರಸ್ತಾಪಿಸುವ ಮಧ್ಯಸ್ಥಿಕೆಗಳು, ಯೋಜನೆಯನ್ನು ಪ್ರಾರಂಭಿಸಲು ಅವಶ್ಯವಿರುವ ಮಾನವ ಸಂಪನ್ಮೂಲ ಹಾಗೂ ಕಾರ್ಯ ತಂತ್ರಗಳ ವಿವರ.
- ಉತ್ಪನ್ನಗಳನ್ನು ಖರೀದಿಸುವ ಕ್ರಿಯಾ ಯೋಜನೆ
- ಯೋಜನೆಯ ಪಾಲುದಾರರ ಪಾತ್ರಗಳು ಮತ್ತು ಹೊಣೆಗಾರಿಕೆಗಳು
- ಪ್ರಸ್ತಾಪಿತ ಹೊಸ ತಂತ್ರಜ್ಞಾನಗಳು
- ಖಾಸಗಿ ಸಂಸ್ಥೆಗಳು ಸಲ್ಲಿಸುವ ವಿವರವಾದ ಯೋಜನಾ ವರದಿಯಲ್ಲಿ ಯೋಜನೆಯ ಅನುಷ್ಠಾನದ ಸಮಯದಲ್ಲಿ ಪ್ರಗತಿ ಪರಿಶೀಲಿಸಲು ಸ್ಪಷ್ಟವಾಗಿ ಪರಿಶೀಲಿಸಬಹುದಾದ ಸೂಚಕಗಳೊಂದಿಗೆ ಫಲಿತಾಂಶ ಚೌಕಟ್ಟು (Results Framework Development) ದಾಖಲಾತಿಯನ್ನು ಒದಗಿಸುವುದು.
- ಉಸ್ತುವಾರಿ ಮತ್ತು ಮೌಲ್ಯಮಾಪನ
- ನಿರೀಕ್ಷಿತ ಫಲಶೃತಿ

ಆಯುಕ್ತರು, ಕೃಷಿ ಇಲಾಖೆ/ ಜಲಾನಯನ ಅಭಿವೃದ್ಧಿ ಇಲಾಖೆರವರು ಕೇಂದ್ರ ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆ ಟಿಪ್ಪಣಿ ಸಂ:ಪಿಡಿ 57 ಪಿಎಫ್‌ಒ 2017 ದಿನಾಂಕ: 18–08–2017, ಆರ್ಥಿಕ ಇಲಾಖೆ ಟಿಪ್ಪಣಿ ಸಂ: ಆಇ 515 ವೆಚ್ಚ–4/2017 ದಿನಾಂಕ: 31–08–2017 ರಲ್ಲಿ ನೀಡಲಾದ ಸಹಮತಿ ಮೇರೆಗೆ ಹಾಗೂ ದಿನಾಂಕ: 26–10–2017 ರಂದು ನಡೆದ ಸಚಿವ ಸಂಪುಟದ ತೀರ್ಮಾನದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

27/11/17

(ಎ. ಪುರುಷೋತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

27/11/17

ಇವರಿಗೆ:–

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು–01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.

3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೇ ಇಲಾಖೆ, ಬೆಂಗಳೂರು.
7. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
8. ಆಯುಕ್ತರು,/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
9. ಆಯುಕ್ತರು,/ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು.
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
13. ಎಲ್ಲಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರುಗಳು (ಕೃಷಿ ನಿರ್ದೇಶಕರ ಮುಖಾಂತರ).
14. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ– 4&5), ಆರ್ಥಿಕ ಇಲಾಖೆ, ಬೆಂಗಳೂರು
16. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
17. ಸಚಿವ ಸಂಪುಟ ಶಾಖೆ (ಪ್ರಕರಣ ಸಂ:ಸಿ.672/2017), ವಿಧಾನಸೌಧ, ಬೆಂಗಳೂರು.
18. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.